

# ಮೇಡಂ ಮದುವೆ

'ನಮ್ಮ ಮ್ಯೂಜಿಕ್ ಮೇಡಂಗೆ
ಎಷ್ಟೊಂದ್ ಪ್ರೀತಿ ನಮ್ಮೇಲೆ
ಬೇಕಾದ್ ಮಾಡೋಕ್ ಕೊಡ್ತಾರೆ
ಹಾಡೋವಾಗ್ಲೂ ನಗ್ತಾರೆ

ಎಲ್ಲ ವಾದ್ಯ ನುಡಿಸ್ತಾರೆ
ಡ್ಯಾನ್ಸೂ ಮಾಡಿ ಕಲಿಸ್ತಾರೆ
ಒಂದಿನಾನೂ ಬೈಯಲ್ಲ
ಕೈಯಲ್ ಕೋಲೇ ಹಿಡಿಯಲ್ಲ

ನಮ್ಗೆಲ್ಲ ಬೇಜಾರ್ ಮಾಡಿ
ಶಾಲೆ ಬಿಟ್ಟು ಹೋಗ್ತಾರಂತೆ
ಮದ್ವೆ ಆದ ಮರುದಿನದಿಂದ
ಶಾಲೆಗೇ ಅವರು ಬರಲ್ವಂತೆ'

ಅಂತ ಪುಟ್ಟಿ ಅಮ್ಮನ ಹತ್ರ
ದೂರು ಹೇಳಿ ಅತ್ಕೊಂಡು
ಎಷ್ಟು ರಮ್ಸಿದ್ರೂ ಸುಮ್ನಾಗ್ಲಿಲ್ಲ
ಕಣ್ಣೀರ್ ಸುರಿಸ್ತಾ ತಬ್ಕೊಂಡು

ಪಟ್ಟು ಬಿಡದ ಪುಟ್ಟಿ ಮರುದಿನ
ಅಳ್ತಾ ಟೀಚರ್‌ನ ಹಿಡ್ಕೊಂಡು
'ಟೀಚರ್ ಮದ್ವೆ ಆಗಲೇಬೇಕೆ?'
ಅಂದಳು ಕಾಲು ಕಟ್ಕೊಂಡು

ಅಲ್ಲೇ ಇದ್ದ ಟೀಚರ್ ಗಂಡ
ಮುಸಿ ಮುಸಿ ನಗ್ತಾ ನೋಡಿದ್ರು
'ಏನ್ರೀ ಮೇಡಂ ಏನ್ಮಾಡನ?'
ಅಂತ ಟೀಚರನ್ನೇ ಕೇಳಿದ್ರು

ಅಳೋ ಪುಟ್ಟಿ, ನಗೋ ಗಂಡ
ಟೀಚರ್ ನಾಚುತ ನಿಂತ್ಕೊಂಡ್ರು
ಗಟ್ಟಿಯಾಗಿ ಪುಟ್ಟೀನ್ ತಬ್ಕೊಂಡ್
'ನಂಗಿಂಥ ಮಗ್ಳೇ ಬೇಕಂದ್ರು!!'

